# ಪ್ರಬಂಧ ಸಾಹಿತ್ಯ ಚರಿತ್ರೆಯ ವಿಸ್ತಾರ (ಡಾ. ಮಹಾದೇವ್ ಬಡಿಗೇರರವರ ಪ್ರಬಂಧ ಸಾಹಿತ್ಯ)

**ಭೀಮಣ್ಣ ಎಚ್.**

ಸಹ ಪ್ರಾಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ಫರಹತಾಬಾದ, ಕಲಬುರಗಿ.

**Received: 18-02-2024** ; **Acepted: 10-05-2024 ; Published: 08-06-2024**

**DOI: https://doi.org/10.5281/zenodo.11526005**

## ABSTRACT:

ಕನ್ನಡ ಸಾಹಿತ್ಯದಲ್ಲಿ ಪ್ರಬಂಧ ಸಾಹಿತ್ಯವು ದಶಕಗಳಿಂದ ಬೆಳೆದು ಬಂದಿದೆ. ಕನ್ನಡ ಸಾಹಿತ್ಯದಲ್ಲಿ ಹಲವಾರು ಪ್ರಬಂಧಕಾರರು ತಮ್ಮ ಬರಹದ ಮೂಲಕ ಕನ್ನಡ ಸಾಹಿತ್ಯವನ್ನು ಶ್ರೀಮಂತ ಗೊಳಿಸಿದ್ದಾರೆ. ಪ್ರಮುಖವಾಗಿ ಕನ್ನಡ ಸಾಹಿತ್ಯದಲ್ಲಿ ಪ್ರಬಂಧ ಸಾಹಿತ್ಯವನ್ನು ನಗೆ ಬರಹ, ವ್ಯಕ್ತಿ ಚಿತ್ರಗಳು, ನೀತಿ ಬೋದೆ, ಲಲಿತ ಪ್ರಬಂಧಗಳು ಎಂದು ಪರಿಗಣಿಸುತ್ತಿದ್ದರು. ನಂತರ ಇಂಗ್ಲಿಷ್ ಭಾಷೆಯ ಎಸ್ಸೆ ಪದಕ್ಕೆ ಸಂವಾಧಿಯಾಗಿ ಪ್ರಬಂಧ ಎಂದು ಕರೆಯತೊಡಗಿದರು. ಇದು ಕನ್ನಡ ಸಾಹಿತ್ಯದಲ್ಲಿ ಹೆಂಮ್ಮರವಾಗಿ ಬೆಳೆಯ ತೊಡಗಿತು.

ಡಾ. ಮಹಾದೇವ ಬಡಿಗೇರವರು ಈ ಪ್ರಬಂಧ ಸಾಹಿತ್ಯದಲ್ಲಿ ಲಲಿತ ಪ್ರಬಂಧ ಸಾಹಿತ್ಯಕ್ಕೆ ಸಂಬಂಧಿಸಿದ ಹಲವಾರು ವಿಷಯಗಳನ್ನು ಸಂಶೋಧನೆ ಮಾಡುವುದರ ಮೂಲಕ ಒಂದೆಡೆ ಕಲೆ ಹಾಕಿ ಸಾಹಿತ್ಯ ಓದುಗರಿಗೆ ಕಟ್ಟಿಕೊಟ್ಟಿದ್ದಾರೆ. ಪ್ರಬಂಧ ಸಾಹಿತ್ಯದ ಸೂಕ್ಷ್ಮ ಸಂವೇದನೆಯ ಹೊರನೋಟ ಮತ್ತು ಒಳನೋಟಗಳನ್ನು ಒರೆಗಲ್ಲಿಗೆ ಹಚ್ಚಿ ವಿಶ್ಲೇಷಿಸಿದ್ದಾರೆ. ಲಲಿತ ಪ್ರಬಂಧ ಸಾಹಿತ್ಯದ ಅಧ್ಯಯನವನ್ನು ಮೀಮಾಂಸೆ, ಸಾಹಿತ್ಯ ಚರಿತ್ರೆ ಮತ್ತು ಸಮೀಕ್ಷೆ ಅಧ್ಯಯನದ ಮುಖಾಂತರ ಸಾಹಿತ್ಯದ ಅಂತರ್ಶಿಸ್ತಿಯ ಅಧ್ಯಯನಕ್ಕೆ ಒಳಪಡಿಸಿ ಸಾಹಿತ್ಯದ ರೂಪವಾಗಿ ಲಲಿತ ಪ್ರಬಂಧ ಸಾಹಿತ್ಯದ ಹಲವು ನೆಲೆಗಳನ್ನು ಕಟ್ಟಿಕೊಟ್ಟಿದ್ದಾರೆ. ಈ ಅಧ್ಯಯನದಲ್ಲಿ ಪ್ರಬಂಧ ಸಾಹಿತ್ಯದ ಸ್ವರೂಪ, ಲಕ್ಷಣ, ಪ್ರಕಾರಗಳು, ಪ್ರಬಂಧ ಸಾಹಿತ್ಯ ಚರಿತ್ರೆ, ಅನುವಾದಕ, ಸಂಪಾದಕ ಇಂತಹ ಹಲವು ವಿಷಯಗಳನ್ನು ಮಹಾದೇವ್ ಬಡಿಗೇರ ಅವರ ಸಂಶೋಧನಾತ್ಮಕ ನೆಲೆಗಳುಳ್ಳ ಪ್ರಬಂಧ ಸಾಹಿತ್ಯದ ರಚನೆಯು ಕನ್ನಡ ಸಾಹಿತ್ಯಕ್ಕೆ ಅತ್ಯಂತ ಮಹತ್ವದಾಗಿದೆ. ಲಲಿತ ಪ್ರಬಂಧ ಸಾಹಿತ್ಯ ಚರಿತ್ರೆ ಅಧ್ಯಯನದ ಕೊನೆಯ ಭಾಗದಲ್ಲಿ ಲೇಖಕರು ಪ್ರಬಂಧ ಸಾಹಿತ್ಯದ ಕೊಡುಗೆ, ಅಧ್ಯಯನದ ಇತಿಮಿತಿಗಳು ಜೊತೆಗೆ ಸಾಧ್ಯತೆಗಳನ್ನು ಕುರಿತು ವಿವರಿಸಿದ್ದಾರೆ.

**KEYWORDS:**

ಸಾಹಿತ್ಯ ಪ್ರಕಾರ, ವಿಮರ್ಶೆ, ಸಂಶೋಧನೆ, ಲಲಿತ ಪ್ರಬಂಧಗಳು.

ಡಾ. ಮಹಾದೇವ ಬಡಿಗೇರವರ ಪ್ರಬಂಧ ಸಾಹಿತ್ಯ ಚರಿತ್ರೆ ಪುಸ್ತಕವು ಕನ್ನಡ ಸಾಹಿತ್ಯಕ್ಕೆ ಹೊಸತನ ತಂದು ಕೊಡುವಂಥದ್ದಾಗಿದೆ. ವೃತ್ತಿಯಲ್ಲಿ ಪ್ರಾಧ್ಯಾಪಕರಾದ ಇವರು ಪ್ರಬಂಧ ಸಾಹಿತ್ಯದ ಹಲವು ಮಗ್ಗಲುಗಳನ್ನು ಬಿಡಿಬಿಡಿಯಾಗಿ ಹಿಂಜಿ ಓದುಗರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಸುಮಾರು ದಶಕಗಳ ಚರಿತ್ರೆ ಹೊಂದಿರುವ ಪ್ರಬಂಧ ಸಾಹಿತ್ಯ ಬೇರೆ ಪ್ರಕಾರಗಳಿಗಿಂತ ಭಿನ್ನವಾಗಿದೆ. ಭಾಷೆ, ಶೈಲಿ, ವಿಷಯ ವಸ್ತುವಿನ ಹಂದರ ಇವೆಲ್ಲವುಗಳಿಂದ ಭಿನ್ನವಾದ ಈ ಸಾಹಿತ್ಯ ಪ್ರಕಾರಕ್ಕೆ ಡಾ. ಮಹಾದೇವ ಬಡಿಗೇರ್ ಅವರು ಸರಳ ಸುಂದರ ಬರವಣಿಗೆಯ ಮೂಲಕ ಬೃಹತ್ ಆಕಾರದ ಸಾಹಿತ್ಯದ ಮಾದರಿಯನ್ನು ಸಂಕ್ಷಿಪ್ತಗೊಳಿಸಿ ಓದುಗರಿಗೆ ಕಟ್ಟಿ ಕೊಟ್ಟಿದ್ದಾರೆ. ಪ್ರಬಂಧ ಸಾಹಿತ್ಯ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ನಡೆದು ಬಂದ ಬಗ್ಗೆಯನ್ನು ವಿವರಿಸುವ ಸಂದರ್ಭದಲ್ಲಿ ಲೇಖಕರು ಬಹು ಎಚ್ಚರಿಕೆಯಿಂದ ತಮ್ಮ ಬರಹವನ್ನು ವ್ಯಕ್ತಪಡಿಸಿದ್ದಾರೆ. ಪುರಾತನ ಕಾಲದಿಂದಲೂ ಸಂಸ್ಕೃತ, ಜೈನ, ಬೌದ್ಧ ಸಾಹಿತ್ಯ ಪರಂಪರೆಯಲ್ಲಿ ನಡೆದು ಬಂದಿರುವ ರೀತಿಯನ್ನು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. ಭಾಷಾ ದೃಷ್ಟಿಯಿಂದ ಮತ್ತು ಸಾಹಿತ್ಯದ ಓದುಗರ ದೃಷ್ಟಿಯಿಂದ ಈ ಪ್ರಬಂಧವು ಮಹತ್ವ ಪಡೆದುಕೊಂಡಿದೆ. ಪ್ರಬಂಧ ಸಾಹಿತ್ಯದ ಮಹತ್ವ, ಸ್ವರೂಪ, ಬೆಳವಣಿಗೆ ಮತ್ತು ಇಂಗ್ಲಿಷ್ ಸಾಹಿತ್ಯದಿಂದ ನಡೆದ ಹಲವು ಕ್ರಿಯಾತ್ಮಕ ಬೆಳವಣಿಗೆಗಳ ಬಗೆಯನ್ನು ಲೇಖಕರು ಸೂಕ್ಷ್ಮವಾಗಿ ವಿವರಿಸಿದ್ದಾರೆ. ಇಂಗ್ಲೀಷ್ ಸಾಹಿತ್ಯಕ್ಕಿಂತಲೂ ಮುಂಚಿತವಾಗಿ ಸಂಸ್ಕೃತ ಮತ್ತು ಚಂಪು ಸಾಹಿತ್ಯದ ಮಾದರಿಯಲ್ಲಿ ನಡೆದು ಬಂದ ರೀತಿಯನ್ನು ಈ ಪ್ರಬಂಧ ಸಾಹಿತ್ಯ ಚರಿತ್ರೆಯಲ್ಲಿ ತಮ್ಮ ಸುಂದರ ಬರಹದ ಮೂಲಕ ಕನ್ನಡ ಸಾಹಿತ್ಯಕ್ಕೆ ತಿಳಿಸಿಕೊಟ್ಟಿದ್ದಾರೆ.

ಈ ಪುಸ್ತಕದಲ್ಲಿ ಐದು ಅಧ್ಯಾಯಗಳ ಮೂಲಕ ಪ್ರಬಂಧ ಸಾಹಿತ್ಯ ಚರಿತ್ರೆಯನ್ನು ಬಿಡಿ ಬಿಡಿಯಾಗಿ ಕಟ್ಟಿಕೊಟ್ಟಿದ್ದಾರೆ. ಪ್ರಥಮ ಅಧ್ಯಯನದಲ್ಲಿ ಸಂಶೋಧನೆ ಎಂಬುವುದು ಹೇಗೆ ನಡೆದುಕೊಂಡು ಬರುತ್ತದೆ ಅದರಲ್ಲಿಯು ದಲಿತ ಪ್ರಬಂಧ ಮಾದರಿಯನ್ನು ವಿಸ್ತರಿಸುತಾ ವಿದ್ವಾಂಸರ ನಿಲುವುಗಳನ್ನು ತಿಳಿಸುವರು. ಈ ಭಾಗದಲ್ಲಿ ಪ್ರಬಂಧ ಸಾಹಿತ್ಯದ ಸ್ವರೂಪ ಮತ್ತು ಲಕ್ಷಣಗಳನ್ನು

ತಿಳಿಸಿದ್ದಾರೆ. ಕನ್ನಡ ಸಾಹಿತ್ಯದ ಮೇರು ಕೃತಿಗಳಾದ ಕವಿರಾಜಮಾರ್ಗ ಮತ್ತು ವಡ್ಡಾರಾಧನೆ ಕೃತಿಗಳನ್ನು ಪರಿಶೀಲಿಸಲಾಗಿ ಶ್ರೀವಿಜಯ ಗದ್ಯ ಮತ್ತು ಪದ್ಯ ಕವಿಗಳ ಬಗ್ಗೆ ಹೇಳುವಾಗ ಸಾಹಿತ್ಯ ಮಾದರಿಯ ಅರಿವಾಗುತ್ತದೆ. ಶಿವಕೋಟ್ಯಾಚಾರ್ಯ ತನ್ನ ಕೃತಿಯನ್ನು ತ್ರಿಷಷ್ಟಿ ಲಕ್ಷಣ ಪುರಾಣಗಳಲ್ಲಿ ಮಾತ್ರ ಉತ್ತಮ ಉದಾಹರಣೆಯೆಂದು ಹೇಳುವಲ್ಲಿ ಡಾ. ಮಹಾದೇವ ಬಡಿಗೇರ ಹಿಂದೆ ಹೇಳಿದ ಕವಿಗಳ ಉತ್ತಮ ಉದಾಹರಣೆಗಳನ್ನು ಪರಿಚಯಿಸುವರು. ಇಂಗ್ಲಿಷ್ ಮತ್ತು ಕನ್ನಡ ಪದಗಳ ಬಳಕೆಯಲ್ಲಿ ಪ್ರಬಂಧ ಸಾಹಿತ್ಯ ನಡೆದು ಬಂದು ನೆಲೆಯಲ್ಲಿಯೇ ಕನ್ನಡ ಸಾಹಿತ್ಯದ ಲಕ್ಷಣಗಳನ್ನು ಕಟ್ಟಿಕೊಟ್ಟಿದ್ದಾರೆ. ಈ ಅಧ್ಯಯನದಲ್ಲಿ ಪ್ರಬಂಧ ಸಾಹಿತ್ಯದ ಶೈಲಿ ಮತ್ತು ಲಕ್ಷಣಗಳನ್ನು ವಿವರಿಸಿದ್ದಾರೆ. ಅಧ್ಯಾಯ ಎರಡರಲ್ಲಿ ಪ್ರಬಂಧ ಸಾಹಿತ್ಯದ ಪ್ರಕಾರಗಳ ಬಗ್ಗೆ ವಿವರಿಸಿದ್ದಾರೆ. ಹಲವು ವಿದ್ವಾಂಸರು ವರ್ಗೀಕರಣ ಮಾಡಿದ ಬಗೆಯನ್ನು ಸಂಕ್ಷಿಪ್ತವಾದ ಪಕ್ಷಿ ನೋಟವನ್ನು ಗಮನದಲ್ಲಿಟ್ಟುಕೊಂಡು ಪ್ರಬಂಧ ಸಾಹಿತ್ಯದ ರಚನೆ ಎನ್ನುವುದನ್ನು ವಿವರಿಸಿದ್ದಾರೆ. ಇವರ ಬರವಣಿಗೆಯಲ್ಲಿ ವಿಷಯ, ವಸ್ತು, ಶೈಲಿಯನ್ನು ಆಧಾರವಾಗಿಟ್ಟುಕೊಂಡು ಪ್ರಬಂಧ ಸಾಹಿತ್ಯವನ್ನು ವರ್ಗಿಕರಿಸಿರುವುದು ಕಂಡುಬರುತ್ತದೆ.

ಪ್ರಬಂಧ ಸಾಹಿತ್ಯದಲ್ಲಿ "ವಿವರಣಾತ್ಮಕ, ನಿರೂಪಣಾತ್ಮಕ ವರುಣಾತ್ಮಕವೆಂದು ಪ್ರಬಂಧಗಳನ್ನು ಮೂರು ಪ್ರಕಾರಗಳಲ್ಲಿ ವರ್ಗೀಕರಿಸಿರುವುದು ಉಳಿದೆಲ್ಲ ವರ್ಗೀಕರಣ ಪ್ರೀತಿಗಿಂತ ಹೆಚ್ಚು ಖಚಿತವೆನಿಸುತ್ತದೆ" (ಪು. 9) ಹೀಗೆ ಹಲವು ರೀತಿಯಿಂದ ಬಗೆ ಬಗೆಯ ನಿಲುವುಗಳಿಂದ ಕೂಡಿದ ಸಾಹಿತ್ಯದ ಬಗೆಯನ್ನು ವಿವರವಾಗಿ ಲೇಖಕರು ತಿಳಿಸಿಕೊಟ್ಟಿದ್ದಾರೆ. ಅಧ್ಯಾಯ ಮೂರರಲ್ಲಿ ಪ್ರಬಂಧ ಸಾಹಿತ್ಯ ಚರಿತ್ರೆಯೆಂಬ ಶೀರ್ಷಿಕೆಯಲ್ಲಿ ಸಂಕಲನಗಳು, ಸಂಪಾದನೆಗಳು, ಅನುವಾದಗಳು ಕುರಿತು ಚರ್ಚಿಸಿದ್ದಾರೆ. ಈ ಭಾಗವು ಪ್ರಬಂಧ ಸಾಹಿತ್ಯ ಚರಿತ್ರೆಯಲ್ಲಿ ಅತ್ಯಂತ ಮಹತ್ವದಾಗಿದೆ. ಇಲ್ಲಿ ಹಲವು ಕನ್ನಡ ಸಾಹಿತ್ಯದ ಮಹತ್ವದ ಕವಿಗಳ ಸಾಹಿತ್ಯ ಚರಿತ್ರೆಯನ್ನು ಓದುಗರಿಗೆ ತಿಳಿಸುವಲ್ಲಿ ಡಾ. ಮಹಾದೇವ ಬಡಿಗೇರ್ ಅವರ ಪ್ರಯತ್ನ ಮಹತ್ವದಾಗಿ ಕಂಡುಬರುತ್ತದೆ. ಒಬ್ಬ ಕವಿಯಾಗಿ ಇನ್ನೊಬ್ಬ ಕವಿಯ ಮನೋಭಾವ ಅರಿತುಕೊಂಡು ಸಾಹಿತ್ಯ ರಚನೆ ಮಾಡುವುದು ಅಷ್ಟು ಸುಲಭದ ಕೆಲಸವಲ್ಲ ಇಲ್ಲಿ ಲೇಖಕರು ಇಂಥ ಪ್ರಯತ್ನ ಮಾಡಿರುವುದು ಕಂಡುಬರುತ್ತದೆ. ಅಧ್ಯಾಯ ನಾಲ್ಕರಲ್ಲಿ ಪ್ರಬಂಧ ಸಾಹಿತ್ಯ ಅಧ್ಯಯನದಲ್ಲಿ

ಗ್ರಂಥಗಳು, ಲೇಖನಗಳು ಎಂಬುವುದು ಇಟ್ಟುಕೊಂಡು ಪ್ರಕಟಿತ ಸಾಹಿತ್ಯ ಕ್ರಮಬದ್ಧತೆಯನ್ನು ತಿಳಿಸಿಕೊಟ್ಟಿದ್ದಾರೆ. ಕೊನೆ ಅಧ್ಯಾಯದಲ್ಲಿ ಪ್ರಬಂಧ ಸಾಹಿತ್ಯದ ಕೊಡುಗೆಗಳನ್ನು ತಿಳಿಸಿ ಕೊಟ್ಟಿದ್ದಾರೆ. ಈ ಭಾಗದಲ್ಲಿ ಸಂಕಲನಗಳು, ಸಂಪಾದನೆಗಳು ಕುರಿತು ಚರ್ಚಿಸಿದ್ದಾರೆ. ಹೀಗೆ ಕೊನೆಯದಾಗಿ ಅನುಬಂಧವನ್ನು ಕಟ್ಟಿಕೊಟ್ಟಿದ್ದಾರೆ. ಈ ಕೃತಿಯು ಕನ್ನಡ ಸಾಹಿತ್ಯಕ್ಕೆ ಹೊಸತನವನ್ನು ಕಟ್ಟಿಕೊಡುವಲ್ಲಿ ತನ್ನದೇ ಆದ ಮಹತ್ವದ ಪಾತ್ರವಹಿಸಿದೆ. ಹೀಗೆ ಡಾ. ಮಹಾದೇವ ಬಡಿಗೇರ ಅವರು ಕನ್ನಡ ಸಾಹಿತ್ಯದಲ್ಲಿ ಪ್ರಬಂಧ ಸಾಹಿತ್ಯದ ಬಗ್ಗೆ ತಿಳಿಸುವಲ್ಲಿ ಹಲವು ಮಹಾನ್ ಕವಿಗಳ, ವಿದ್ವಾಂಸರ ನಿಲುವುಗಳನ್ನು ಇಟ್ಟುಕೊಂಡು ಅಧ್ಯಯನ ಮಾಡಿರುವುದು ಕಂಡುಬರುತ್ತದೆ. ಒಬ್ಬ ಲೇಖಕ ತನ್ನ ಸಮಕಾಲಿನ ಸಾಹಿತ್ಯ ಚರಿತ್ರೆಯನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಸಮಕಾಲಿನ ಕವಿ ಮತ್ತು ಕೃತಿಗಳ ಬಗ್ಗೆ ಒಳ್ಳೆಯ ನಿಲುವು ತಾಳಿರುವುದು ಹೆಮ್ಮೆಯ ಸಂಗತಿಯಾಗಿದೆ. ಹಿಂದೆ ಕವಿರಾಜಮಾರ್ಗಕರ ಗದ್ಯ ಮತ್ತು ಪದ್ಯ ಕವಿಗಳ ಪಟ್ಟಿ ಕೊಟ್ಟು ಅವರ ಬಗ್ಗೆ ಹೇಳಿರುವುದು ಡಾ. ಮಹಾದೇವ ಬಡಿಗೇರ ಸಾಹಿತ್ಯ ಓದುಗರಿಗೆ ನೆನಪಿಸಿಕೊಡುತ್ತಾರೆ. ಇಂಥ ಹಲವು ಸೂಕ್ಷ್ಮ ವಿಷಯಗಳು ತಿಳಿಸುವುದರ ಜೊತೆಗೆ ಕನ್ನಡ ಸಾಹಿತ್ಯಕ್ಕೆ ಇಂಥ ಒಂದು ಮಹತ್ವದ ಪ್ರಬಂಧ ಸಾಹಿತ್ಯದ ಮಾದರಿಯನ್ನು ಪರಿಚಯಿಸಿರುವುದು ಹೆಮ್ಮೆಯ ಸಂಗತಿಯಾಗಿದೆ. ಈ ಪ್ರಬಂಧದ ವಸ್ತು, ಶೈಲಿ, ಭಾಷೆ ವ್ಯಾಕರಣದ ನಿಯಮಗಳ ಪರಿಪಾಲನೆಯನ್ನು ಗಮನಿಸಿದರೆ ಪ್ರಾಧ್ಯಾಪಕ ವೃತ್ತಿಯಲ್ಲಿ ಇವರು ಮಾಡಿದ ಸಾಧನೆ ಹೆಮ್ಮೆ ಎನಿಸುತ್ತದೆ. ಡಾ. ಮಹಾದೇವ ಬಡಿಗೇರವರು ಸರಳ ಮತ್ತು ಸುಂದರವಾದ ಬರವಣಿಗೆ ಮೂಲಕ ಕನ್ನಡ ಸಾಹಿತ್ಯದಲ್ಲಿ ಓದುಗರ ಮನಸ್ಸು ಸೆಳೆದಿರುವುದು ಕಂಡುಬರುತ್ತದೆ. ಈ ಕೃತಿಯು ಕನ್ನಡ ಸಾಹಿತ್ಯ ಮತ್ತು ಸಂಶೋಧನೆಯಲ್ಲಿ ಹೊಸ ಓದಿನ ಮೈಲುಗಲ್ಲು ಸೃಷ್ಟಿಸಿರುವುದು ಸಾಹಿತ್ಯ ಆಸಕ್ತರಿಗೆ ಹೆಮ್ಮೆಯ ಸಂಗತಿಯಾಗಿದೆ. ಡಾ. ಮಹಾದೇವ ಬಡಿಗೇರವರು ಕನ್ನಡ ಸಾಹಿತ್ಯಕ್ಕೆ ಇಂಥ ಇನ್ನೂ ಹಲವು ಕೃತಿಗಳನ್ನು ಬರೆಯುವುದರ ಮೂಲಕ ಕನ್ನಡ ಸಾಹಿತ್ಯ ಓದುಗರ ಮನಸ್ಸು ಸೆರೆಹಿಡಿಯುವಂತಾಗಲಿ ಎಂದು ಮತ್ತು ಅವರು ಇನ್ನೂ ಸಾಹಿತ್ಯ ಕೃಷಿಯಲ್ಲಿ ಹೆಚ್ಚಿನ ಸಾಧನೆ ಮಾಡಲೆಂದು ಆಶಯ ವ್ಯಕ್ತಪಡಿಸುತ್ತೇನೆ

## ಆಕರ ಗ್ರಂಥಗಳು:


1. ಮಹಾದೇವ ಬಡಿಗೇರ. (2019). ಎರಡು ನಾಟಕಗಳು. ಶ್ರೀ ಸಿದ್ದಲಿಂಗೇಶ್ವರ ಪ್ರಕಾಶನ. ಕಲಬುರಗಿ.
2. ಮಹಾದೇವ ಬಡಿಗೇರ. (2018). ಪ್ರಬಂಧ ಸಾಹಿತ್ಯ ಚರಿತ್ರೆ. ಶ್ರೀ ಸಿದ್ದಲಿಂಗೇಶ್ವರ ಪ್ರಕಾಶನ. ಕಲಬುರಗಿ.
3. ಮಹಾದೇವ ಬಡಿಗೇರ. (2013). ಲಲಿತ ಪ್ರಬಂಧ ಸಾಹಿತ್ಯ ಸಮೀಕ್ಷೆ. ಶ್ರೀ ಸಿದ್ದಲಿಂಗೇಶ್ವರ ಪ್ರಕಾಶನ. ಕಲಬುರಗಿ.
4. ಮಹಾದೇವ ಬಡಿಗೇರ. (2017). ಅಪೂರ್ವ ಸನ್ಯಾಸಿ (ನಾಟಕ). ಶ್ರೀ ಸಿದ್ದಲಿಂಗೇಶ್ವರ ಪ್ರಕಾಶನ. ಕಲಬುರಗಿ.
5. ಮಹಾದೇವ ಬಡಿಗೇರ. (2013). ಬದುಕಿನ ವಚನಗಳು. ಕನ್ನಡ ನಾಡು ಲೇಖಕರ ಮತ್ತು ಓದುಗರ ಸಂಘ ನಿಮಿತ. ಕಲಬುರಗಿ.



**Funding:**

This study was not funded by any grant.


**Conflict of interest:**

The Authors have no conflict of interest to declare that they are relevant to the content of this article.


**About the License:**

© The Authors 2024. The text of this article is open access and licensed under a Creative Commons Attribution 4.0 International License.